# ಕನಕದಾಸರ ಚಿಂತನೆಗಳು

**ರವಿ ಬಸವರಾಜ ಸಣಕಂಬಿ**

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ, ಮಹತ್ವದ ವ್ಯಕ್ತಿಗಳು, ಕಾಲ ಸಂದರ್ಭಗಳು ನಮ್ಮ ನಡುವೆ ಅಚ್ಚಳಿಯದೇ ಉಳಿದು ಬಿಡುತ್ತವೆ. ಈ ಕಾರಣಕ್ಕೆಕನಕದಾಸರುತುಂಬಾ ಮಹತ್ವದ ವ್ಯಕ್ತಿ. ಹಾವೇರಿಜಿಲ್ಲೆ ಬಾಡದಲ್ಲಿ ಜನಿಸಿದ ಕನಕದಾಸರ ತಂದೆ–ತಾಯಿಗಳು ಬೀರಪ್ಪ ಹಾಗೂ ಬಚ್ಚಮ್ಮ. ಆ ಕಾಲಕ್ಕೆ ಬಾಡ–ಬಂಕಾಪುರ ಸೇರಿ 78 ಹಳ್ಳಿಗಳಿಗೆ ಡಣ್ಣಾಯಕನಾಗಿದ್ದ. ಕನಕ ವಿಜಯನಗರದಅರಸ ಶ್ರೀಕೃಷ್ಣದೇವರಾಯ (ಕ್ರಿ.ಶ.1509–1529)ರ ವೈಭವದ ದಿನಗಳಲ್ಲಿ ಬಾಳಿ– ಬದುಕಿದವನು. ಕನಕ ಸಂಸಾರಿಯಾಗಿದ್ದವನು.ಆದರೆ ಅವನ ಹೆಂಡತಿ–ಮಕ್ಕಳ ಬಗೆಗೆ ಹೆಚ್ಚಿನ ಮಾಹಿತಿಇಲ್ಲ. ವಿಜಯನಗರದ ಸಾಮ್ರಾಟನ ಪರವಾಗಿ, ತನ್ನಗಡಿ ಪ್ರದೇಶದ ಮೇಲೆ ಶತ್ರುಗಳು ಎರಗಿ ಬಂದಾಗಯುದ್ಧಕ್ಕೆ ನಿಂತ ಕನಕ ಅದರಲ್ಲಿ ಸೋಲುಣ್ಣುತ್ತಾನೆ. ಸೋಲುವುದಷ್ಟೇಅಲ್ಲ ಸೋತಕನಕನನ್ನು ಶತ್ರು ಸೈನ್ಯದವರು ಬೆನ್ನಟ್ಟಿ ಹೊಡೆದರು.ಆ ಹೊಡೆತಕ್ಕೆ ಪ್ರಜ್ಞಾಶೂನ್ಯನಾಗಿದ್ದೆಎಂದುಅವರೇ ಹೇಳಿದ್ದಾರೆ.

"ಅರಿಗಳು ದಂಡೆತ್ತಿ ಬರಲು ನಾನವರೊಡನೆ

ಪರಿಪರೀ ಹೋರುತಿರಲು

ಮರುಳರೆನ್ನನ್ನು ಜೈಸಿ ಹರಿದಟ್ಟಿ ಬಂದೆನ್ನ

ಧರೆಗುರುಳಿಸಿದರೊ ಹರಿಯೆ"।

ಈ ಮಹತ್ವದಘಟನೆಯೊಂದು ನಡೆಯದೆ ಹೋಗಿದ್ದರೆ ನಾವು ಈಗ ಚರ್ಚೆಯಾಗುತ್ತಿರುವಕನಕದಾಸರನ್ನುಕಾಣಲು ಸಾಧ್ಯವಾಗುತ್ತಿರಲಿಲ್ಲ. ನನ್ನಲ್ಲಿದ್ದಅಹಂಕಾರವನ್ನು ಈ ಯುದ್ಧ ಕಳೆಯಿತು ಎನ್ನುತ್ತಾನೆ.

"ಸಾರಿ ಹೊರಡುವಛತ್ರ ಭೇರಿ ತಮ್ಮಟೆಗಳು

ಭೋರೆಂಬ ವಾದ್ಯಗಳು ಹರಿಯೆ

ವೀರರಾಹುತ ಬಲದ ಭಾರವನ್ನುತರಿದಹಂ

ಕಾರವನು ಮುರಿದೆ ಹರಿಯೆ"

ಎನ್ನುವಲ್ಲಿ ಸಾಮಾನ್ಯತಿಮ್ಮಪ್ಪ, ಕನಕದಾಸನಾದ ಶ್ರೇಷ್ಠ ಸಂದರ್ಭವಿದೆ.ಈ ಯುದ್ಧದಿಂದಾದ ಬದಲಾವಣೆಯೇನು?ಆತನೆಒಂದುಕಡೆ ಹೀಗೆ ಹೇಳುತ್ತಾನೆ.

"ದೊರೆತನವ ಬಿಡಿಸಿ, ಸುಸ್ಥಿರ ಮಾರ್ಗ ತೋರಿಸಿದೆ

ನರಮಾತ್ರದವನೆನದೆ ಹರಿಯೆ

ದುರುಳತನದಲಿ ಜನರ ಪರಿಪರೀ ಬಾಧಿಸಿ

ಸೂರೆಗೊಂಬುದು ಪರಿಹಾರವಾಯಿತು ಹರಿಯೆ"

ಹರಿಯುಯುದ್ಧದ ಮೂಲಕ ನನ್ನಲ್ಲಿದ್ದದೊರೆತನದಅಹಂಕಾರವಕಿತ್ತೆಸೆದಎನ್ನುತ್ತಾನೆ. ಅಷ್ಟೇ ಅಲ್ಲದೆ ಸುಸ್ಥಿರ ಮಾರ್ಗಎನ್ನುವಲ್ಲಿ ಹಿಂಸೆಯಿಂದ ಭಕ್ತಿಯೆಡೆಗೆ ಹೊರಳಿದ ಸಂದರ್ಭವದು.ರಾಜರ ಬಗೆಗೆ ಆತ ಹೇಳುವ ವಿಚಾರಗಳು ಎಷ್ಟು ಸತ್ಯವಲ್ಲವೇ?

ಡಣ್ಣಾಯಕನಾಗಿದ್ದಕನಕದಾಸರುಯುದ್ಧದ ಹಿಂಸೆಯಿಂದತತ್ತರಗೊಂಡು ಜಿಗುಪ್ಸೆಗೊಳಗಾಗಿ ದಾಸನಾದ. ಅದು ವಿಜಯನಗರದ ಶ್ರೀವ್ಯಾಸರಾಯರ ಮಠದಲ್ಲಿ, ವ್ಯಾಸರಾಯರೇತನ್ನ ಗುರುಗಳು ಎಂದು ಅನೇಕ ಕಡೆ ಹೇಳಿಕೊಂಡಿದ್ದಾರೆ.ಅದನ್ನುಅವರ 'ಕೂಸನು ಕಂಡಿರಾ" ಎನ್ನುವಕೀರ್ತನೆಯಲ್ಲಿಕಾಣಬಹುದು.

"ಪ್ರಸಿದ್ಧ ವ್ಯಾಸರಾಯರೆಂಬ ಕೂಸು

ಪ್ರವೀಣ ವಿದ್ಯೆಯೊಳ್ ಎನಿಸಿದ ಕೂಸು

ಪ್ರಹ್ಲಾದನೆಂಬ ಆಹ್ಲಾದದ ಕೂಸು

ಪ್ರಸನ್ನಕಾಗಿನೆಲೆಯಾದಿ ಕೇಶವನ ಕೂಸು"

ತಾನು ವ್ಯಾಸರಾಯರ ಕೂಸು, ಕಾಗಿನೆಲೆಯಾದಿಕೇಶವನ ಕೂಸು ಎನ್ನುವಲ್ಲಿಗುರುಭಕ್ತಿ ಹಾಗೂ ದೈವಭಕ್ತಿಯು ಮಡುಗಟ್ಟಿರುವುದನ್ನುಕಾಣಬಹುದು. ಕನಕ ಸಂಸಾರಿಯಾಗಿದ್ದವನುಎನ್ನುವುದಕ್ಕೆ ಈ ಕೆಳಗಿನ ಸಾಲುಗಳು ಪುಷ್ಟಿ ಕೊಡುತ್ತವೆ.

"ಗಾಳಿಗೊಡ್ಡಿದ ಸೊಡರು ಈ ಸಂಸಾರ

ಸಾಗರವನುತ್ತರಿಸವೊಡೆಕಂಸಾರಿ

ನಾಮವೊಂದೇ ಸಾಕು"

ಎನ್ನುವಲ್ಲಿ ಈ ಬಾಳು ನಶ್ವರಎನ್ನುವ ನಿಲುವಿಗೆ ಕನಕ ಬರುತ್ತಾನೆ.

## ಸಾಮಾಜಿಕ ಕಾಳಜಿ (ವಿಡಂಬನೆ)

ವಚನ ಚಳುವಳಿಯ ಸಾಮಾಜಿಕ ಹಾಗೂ ಧಾರ್ಮಿಕಉದ್ಧಾರತೆಯ ಕಾಳಜಿಯನ್ನು ದಾಸಪಂಥದಲ್ಲಿಕನಕದಾಸರು ಮುಂದುವರೆಸಿಕೊಂಡು ಬಂದರು.ಸಮಾಜದ ಓರೆಕೋರೆಗಳನ್ನು ತಿದ್ದಲು ನಿಂತಕನಕದಾಸರುಅಪಮಾನ, ಅವಮಾನಗಳಿಗೆ ಜಗ್ಗಲಿಲ್ಲ, ಸಮಾಜದಜಾತಿ ಕಟ್ಟಳೆಯನ್ನು ತೊಡೆದು ಹಾಕಲು ನಿರ್ಧರಿಸಿದ ಕನಕದಾಸರು, ಜಾತಿ ವ್ಯವಸ್ಥೆಎನ್ನುವುದೇಒಂದು ಮೌಢ್ಯ, ಜಾತಿಇಡೀ ಸಮಾಜವನ್ನು ಹಾಳು ಮಾಡುತ್ತದೆಎನ್ನುತ್ತಾರೆ.ಜಾತಿ ಮಾಡುವವರಿಗೆ "ನಿಮ್ಮಕುಲದ ಮೂಲವೇನಾದರೂ ಬಲ್ಲಿರಾ" ಎಂದು ಪ್ರಶ್ನಿಸುತ್ತಾರೆ.

"ಕುಲಕುಲವೆಂದು ಹೊಡೆದಾಡದಿರಿ ನಿಮ್ಮ

ಕುಲದ ನೆಲೆಯನೇನಾದರೂ ಬಲ್ಲಿರಾ?

ಹುಟ್ಟಿದಾ ಯೋನಿಗಳಿಲ್ಲ, ಮೆಟ್ಟದಾ ಭೂಮಿಗಳಿಲ್ಲ

ಅಟ್ಟುಉಣ್ಣದಾ ವಸ್ತುಗಳಿಲ್ಲವೊ॥"

ಎಂದುಕುಲದ ಬಗ್ಗೆ ಮಾತನಾಡುವ ನಾಲಿಗೆಯೇಅಸಹ್ಯಎನ್ನುತ್ತಾರೆ.

ಶತಶತಮಾನಗಳಿಂದ ಈ ಮಣ್ಣಿನಲಿ ತಳಸಮುದಾಯದವರು ಸವರ್ಣಿ –ಯರನ್ನು ಸ್ಪರ್ಶಿಸುವ ಹಾಗಿರಲಿಲ್ಲ. ಆ ರೀತಿಯಾದಅವಮಾನದಿಂದಕನಕದಾಸರು ಹೊರತಾಗಿರಲಿಲ್ಲ. ಬಂಡಾಯ ಮನೋಧರ್ಮದವನಾದ ಕನಕ ಇಂತಹ ಪದ್ಧತಿಯನ್ನುಖಂಡಿಸದೆ ಬಿಡಲಿಲ್ಲ.

"ಮುಟ್ಟದಿರು ನಡೆಯೆಂದುಜನರೆಲ್ಲರೂಎನ್ನ

ಅಟ್ಟಿ ಬಡಿಯುತ್ತಲಿಹರೋ ಕೃಷ್ಣಾ

ನಾವು ಕುರುಬರು ನಮ್ಮದೇವರೋ ಬೀರಪ್ಪ

ಕಾವ ನಮ್ಮಜ್ಜ ನರಕುರಿಯು॥"

"ಕುಲವಿಲ್ಲದದಾಸಕುರುಬದಾಸ ನಾನಯ್ಯ।

ಕಾಳಿದಾಸನ ಮನೆಯ ಕೀಳುದಾಸ ।

ಆಳುದಾಸನ ನಾನು ಮೂಳದಾಸ ।

ಆತ್ಮಯಾವ ಕುಲ, ಜೀವಯಾವ ಕುಲ

ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ॥

ಆತ್ಮಾಂತರಾತ್ಮ ನೆಲೆಯಾದಿ ಕೇಶವ ।

ಪ್ರೀತನಾದ ಮೇಲೆ ಯಾತರ ಕುಲವಯ್ಯ?॥"

ಪ್ರತಿಭೆಯನ್ನು ಆಧಾರವಾಗಿಟ್ಟುಕೊಳ್ಳದೇ, ಬರೀಜಾತಿಯ ಪರಿಗಣನೆ ತೆಗೆದುಕೊಳ್ಳುವ ಮೇಲ್ಜಾತಿಯವರು, ತಳಸಮುದಾಯಗಳಿಗಿಂತ ಏಕೆ ಭಿನ್ನವಾಗುವುದಿಲ್ಲ ಎನ್ನುವುದಕ್ಕೆಕನಕದಾಸರುಕೊಡುವ ಕಾರಣಗಳು ಗಮನ ಸೆಳೆಯುತ್ತವೆ.

"ಕುಲಕುಲ ಕುಲವೆನ್ನುತಿಹರು

ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ

ಕೆಸರೊಳು ತಾವರೆ ಪುಟ್ಟಲುಅದತಂದು।

ಬಿಸಜನಾಭವನಿಗರ್ಪಿಸಲಿಲ್ಲವೆ?

ಹಸುವಿನ ಮಾಂಸದೊಳುತ್ಪತ್ತಿಕ್ಷೀರವು।

ವಸುಧೆಯೊಳಗೆ ಭೂಸುರರುಣಲಿಲ್ಲವೆ?

ಮೃಗಗಳ ಮೈಯಲ್ಲಿ ಪುಟ್ಟಲುಕಸ್ತೂರಿ।

ತೆಗೆದು ಪೂಸುವರು ದ್ವಿಜರೆಲ್ಲರೂ ॥

ಎನ್ನುವಲ್ಲಿತಾವರೆ, ಹಸುವಿನ ಹಾಲು, ಮೃಗದಕಸ್ತೂರಿಗಿಂತ ಮನುಷ್ಯ ಕೀಳಲ್ಲ ಎನ್ನುವಎಚ್ಚರಿಕೆ ನೀಡುತ್ತಾ, ಮಾನವೀಯತೆಯ ಮುಂದೆಇನ್ನಾವಧರ್ಮವೂಇಲ್ಲಎಂದು ಹೇಳುತ್ತಾನೆ.

ತಾವು ಮೇಲು ಎಂದು ಬೀಗುವ ಜನರಿಗೆ ಕನಕ ಕೇಳುವ ಪ್ರಶ್ನೆಗಳು ಅವರಿಗೆ ಸರಿಯಾದ ಬಿಸಿಯನ್ನೆ ಮುಟ್ಟಿಸುತ್ತವೆ,

"ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ?

ನೀತಿತಪ್ಪಿದವರೆಲ್ಲದೇವ ಬ್ರಾಹ್ಮಣರೆ ಕೃಷ್ಣಾ?

ಭಂಗಿ ಮುಕ್ಕುಗಳೆಲ್ಲ ಲಿಂಗವಂತರ ಹರೆ ಕೃಷ್ಣಾ?

ವೇಷಧಾರಿಗಳೆಲ್ಲ ಸನ್ಯಾಸಿಗಳಾಗುವರೆ ಕೃಷ್ಣಾ?

ಹೊಟ್ಟೆಗುಡ ಮೃಗಗಳೆಲ್ಲ ಶ್ರೀವೈಷ್ಣವರೆ ಕೃಷ್ಣಾ?"

ಜಾತಿಯ ಸಂಘರ್ಷದ ಕತೆಯನ್ನೊಳಗೊಂಡ ಅವರ 'ರಾಮಧಾನ್ಯಚರಿತೆ' ಲೋಕದ ಗಮನ ಸೆಳೆಯುತ್ತದೆ. ಒಟ್ಟಾರೆಯಾಗಿಕನಕದಾಸಜಾತಿ ಎಂಬ ಅಸಹ್ಯದ ವಿರುದ್ಧ ಹೋರಾಡಿದ್ದು, ಜಾತಿವಂತರನ್ನುಅದರಿಂದ ಹೊರ ಬರಲು ಪ್ರೇರೇಪಿಸಿದ್ದು ಒಂದುಐತಿಹಾಸಿಕ ಸಂದರ್ಭವೆಂದೆ ನಾನು ಭಾವಿಸುತ್ತೇನೆ.

## ಕನಕದಾಸರ ಭಕ್ತಿ

ಬಂಡಾಯದಜೊತೆಯಲ್ಲೇ ಭಕ್ತಿಯೆನ್ನುವುದುಕನಕದಾಸರಲ್ಲಿ ಮಡುಗಟ್ಟಿತ್ತು. ಭಕ್ತಿಯಿಂದಲೇಜಗದುದ್ಧಾರಎಂದು ನಂಬಿದವರು.ಭಕ್ತಿಯಿಂದಲೇ ನೆಮ್ಮದಿ, ಆನಂದ, ಮುಕ್ತಿ ಎಂದುಕನಕದಾಸರುಅರಿತಿದ್ದರು.ಅಂತಹ ಭಕ್ತಿಯಅರಿವನ್ನು ಮೂಡಿಸುವ ಪ್ರಯತ್ನ ಮಾಡಿದರು.

"ನೀನೆ ದಯಮಾಡಿ ಸಲಹೊ ಎನ್ನನು ಕೃಷ್ಣ

ಕಾನನದೊಳು ಕಣ್ಣಮುಚ್ಚಿ ಬಿಟ್ಟಿಹರೊ॥"

ತಾನು ಲೌಕಿಕ ಜೀವನವೆಂಬ ಕಗ್ಗತ್ತಲಲ್ಲಿದ್ದೇನೆ. ತನ್ನನ್ನು ಬೆಳಕಿನೆಡೆಗೆ ಕರೆದೊಯ್ಯಲು ಕನಕ ದೇವರಲ್ಲಿ ಪ್ರಾರ್ಥಿಸುತ್ತಾನೆ. ಇಲ್ಲಿಯವರೆಗಿನ ಮನುಜಸೇವೆಯಲ್ಲಿಆತನಿಗೆತೃಪ್ತಿಯಿಲ್ಲ. ಅದಕ್ಕಾಗಿಯೇ

"ಸಾಕು ಸಾಕು ಮನುಜ ಸೇವೆ ರಂಗಯ್ಯ

ಬೇಕು ನಿನ್ನ ಭಜನೆ ॥" – ಎನ್ನುತ್ತಾನೆ.

ವ್ಯಾಸರ ಮಠದಲ್ಲಿ ಕನಕನ ಭಕ್ತಿ ಪರೀಕ್ಷೆ ನಡೆಯುತ್ತದೆ.ತನ್ನ ಶಿಷ್ಯರಿಗೆ ಬಾಳೆಹಣ್ಣನ್ನು ನೀಡಿದ ವ್ಯಾಸರಾಯರುಅದನ್ನುಯಾರೂಇಲ್ಲದ ಸ್ಥಳದಲ್ಲಿ ತಿಂದು ಬರಲು ಹೇಳುತ್ತಾರೆ. ಎಲ್ಲರೂತಿಂದು ಬಂದು ವ್ಯಾಸರಎದುರಿಗೆ ನಿಂತಾಗ, ಕನಕ ಮಾತ್ರ ಬಾಳೆಹಣ್ಣಿನೊಂದಿಗೆ ಮರಳಿ ಬರುತ್ತಾನೆ. ಆಗ ವ್ಯಾಸರಾಯರು ಏಕೆ ಕನಕ ನಿನಗೆ ಏಕಾಂತ ಸ್ಥಳ ಎಲ್ಲಿ ಸಿಗಲಿಲ್ಲವೆ?ಎಂದಾಗ, ಕನಕ ಇಲ್ಲ ನನಗೆ ಏಕಾಂತ ಸ್ಥಳ ಎಲ್ಲಿಯೂ ಸಿಗಲಿಲ್ಲ. ನಾನು ಎಲ್ಲೇ ಹೋದರೂಆತನೊಬ್ಬನಿದ್ದ.ಆತನೇ ಕೇಶವ ಎಂದುಉತ್ತರಿಸುತ್ತಾನೆ. ಆಗ ವ್ಯಾಸರಾಯರು ಕನಕನ ಭಕ್ತಿಯನ್ನು ಮೆಚ್ಚುತ್ತಾರೆ.ಎಲ್ಲಕಡೆಒಬ್ಬನಿದ್ದ, ಆತ ಕೇಶವ ಎನ್ನುವಲ್ಲಿ ಕನಕ ನಂಬಿದಂತದೈವತ್ವಅರ್ಥವಾಗದೆಇರದು.ಕನಕ ನಂಬಿದದೇವರು "ಯಾದೇವಿ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ" ಎನ್ನುವುದು ತಿಳಿಯುತ್ತದೆ.

ವಚನಕಾರರು ಸಂಸಾರವನ್ನುಒಪ್ಪಿಕೊಂಡರೆ (ಅಕ್ಕಮಹಾದೇವಿ ಹೊರತುಪಡಿಸಿ) ದಾಸರುಅದನ್ನು ನಿರಾಕರಿಸಿದ್ದಾರೆ.ಕನಕದಾಸರು ಸಂಸಾರದ ಧೂಳಿನಿಂದ ಹೊರಬಂದವರು.

"ನೆಚ್ಚದಿರು ಸಂಸಾರ ನೆಲೆಯಲ್ಲವೀಕಾಯ

ಅಚ್ಚುತನ ನಾಮವನು ನೆನೆದು ಸುಖಿಯಾಕೊ"

ಎನ್ನುವಲ್ಲಿ ಸಂಸಾರ ನೆಚ್ಚಿದವನಿಗೆ ಸುಖವಿಲ್ಲಎನ್ನುವ ಭಾವವಿದೆ.ಸಂಸಾರಎನ್ನುವುದು ನಾಯಿ ತಲೆ ಮೇಲಿನ ಬುತ್ತಿಯಿದ್ದ ಹಾಗೆ, ಬದುಕಿನಲ್ಲಿ ಕಷ್ಟಗಳು ಬಂದಾಗಯಾರುಜೊತೆಗಿರುವುದಿಲ್ಲ ಎನ್ನುವುದುಕನಕರ ವಾದ.ಅದನ್ನುಅವರ 'ಏನು ಬರುವುದೋ, ಸಂಗಡೇನು ಬರುವುದೋ' ಎಂಬ ಕೀರ್ತನೆಯಲ್ಲಿ ವ್ಯಕ್ತಮಾಡಿದ್ದಾರೆ.

"ಆರು ಹಿತವರುಎಂದು ನಂಬಬೇಡ

ಯಾರಿಗ್ಯಾರಿಲ್ಲಆಪತ್ತು ಬಂದೊದಗಿದೆಡೆ"

ಯಾರಿಗೆಯಾರೂಇಲ್ಲಎನ್ನುವ ಭಾವನೆ ಮನುಷ್ಯನಲ್ಲಿ ಬಂದಾಗಲೇ, ಆತನಅಹಂಕಾರ ಕಳೆದು ಭಕ್ತನಾಗಲು ಸಾಧ್ಯವಾಗುತ್ತದೆ.ಕೊನೆಗೆ ದೇವನಿಗೆತನ್ನನ್ನುತಾನು ಸಮರ್ಪಿಸಿಕೊಳ್ಳುತ್ತಾನೆ. ಕನಕದಾಸರುಕೂಡತಮ್ಮನ್ನು ಅರ್ಪಿಸಿಕೊಳ್ಳುವ ಸಂದರ್ಭವನ್ನು ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು.

"ತನು ನಿನ್ನದುಜೀವನ ನಿನ್ನದೊ

ಅನುದಿನದಲಿ ಬರುವ ಸುಖದುಃಖ ನಿನ್ನದಯ್ಯಾ?

ನಾರಾಯಣನ ಸ್ಮರಣೆಇಲ್ಲದ ಮೇಲೆ ಆ ಬಾಳು ವ್ಯರ್ಥಎನ್ನುವ ಹಂತಕ್ಕೆ ಕನಕ ಬಂದು ನಿಲ್ಲುತ್ತಾನೆ.

"ಆರು ಬಾಳಿದರೇನು ಆರು ಬದುಕಿದರೇನು

ನಾರಾಯಣನ ಸ್ಮರಣೆ ನಮಗಿಲ್ಲದನಕ?"

ಇಲ್ಲಿ ನಾರಾಯಣ, ಹರಿ, ಕೇಶವ ಬೇರೆ ಬೇರೆಯಲ್ಲಎನ್ನುವುದನ್ನು ಮೊದಲು ನಾವು ತಿಳಿಯಬೇಕು.ಆಗ ಕನಕ ಏಕದೇವೋಪಾಸಕನಾಗಿದ್ದಎನ್ನುವುದು ನಮಗೆ ತಿಳಿಯುತ್ತದೆ.

ನಮ್ಮದೇಹದಲ್ಲಿರುವ ಅನೇಕ ದುಷ್ಟತನಗಳು ಕಳೆದುಹೋಗಲು ಸಾಧ್ಯವಾಗುವುದು ಹರಿ ನಾಮಸ್ಮರಣೆಯಿಂದ. ಹರಿನಾಮಸ್ಮರಣೆಯಿಂದಅಂತರಂಗವನ್ನು ಬೆಳಗುವುದು ಹೇಗೆ ಎಂಬುದನ್ನು ಈ ಕೀರ್ತನೆಚೆನ್ನಾಗಿ ಕಲಿಸಿಕೊಡುತ್ತದೆ.

"ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯಾ

ಕೂರಿಗೆಯ ಮಾಡಿ ಬಿತ್ತಿರಯ್ಯಾ ॥ಪ॥

ಹೃದಯ ಹೊಲವನು ಮಾಡಿತನುವ ನೇಗಿಲ ಮಾಡಿ

ತನ್ವಿರಾ ಎಂಬ ಎರಡೆತ್ತ ಹೂಡಿ।

ಜ್ಞಾನವೆಂಬೊಕಣ್ಣಿ ಹಗ್ಗವ ಮಾಡಿ

ಮನವೆಂಬ ಧಾನ್ಯವ ನೋಡಿ ಬಿತ್ತಿರಯ್ಯ ॥1॥

ಕಾಮ ಕ್ರೋಧಗಳೆಂಬ ಗಿಡವನುತರಿಯಿರಯ್ಯ

ಮದ ಮತ್ಸರವೆಂಬ ಪೊದೆಯಇರಿಯಿರಯ್ಯ।

ಪಂಚೇಂದ್ರಿಯಗಳೆಂಬ ಮಂಚಿಕೆಯ ಹಾಕಿರಯ್ಯ

ಚಂಚಲವೆಂಬ ಹಕ್ಕಿಯ ಓಡಿಸಿರಯ್ಯ ॥2॥

ಉದಯಾಸ್ತನವೆಂಬ ಎರಡು ಕೊಳಗವ ಮಾಡಿ

ಆಯುಷದ ರಾಸಿಯನು ಅಳೆಯಿರಯ್ಯ।

ಇದುಕಾರಣಕಾಗಿನೆಲೆಯಾದಿಕೇಶವನ

ಮುದದಿಂದ ನೆನೆನೆನೆದು ಸುಖಿಯಾಗಿರಯ್ಯ॥

ಕನಕ ಹೇಳಿದ ಈ ಸಿದ್ಧಾಂತಗಳನ್ನು ಪಾಲಿಸಿದರೆ, ಸ್ವರ್ಗಸಮಾಜ ನಿರ್ಮಾಣವಾಗುತ್ತದೆ.ಆಗ ಯಾವ ಪೋಲೀಸ್, ಕಾನೂನಿನ ಕಟ್ಟಳೆಗಳು ಈ ಸಮಾಜಕ್ಕೆ ಬೇಕಾಗುವುದಿಲ್ಲ.

ಅವರ "ಎಲ್ಲಾರು ಮಾಡುವುದು" ಎನ್ನುವಕೀರ್ತನೆಯಲ್ಲೂಕೂಡ, ಎಲ್ಲಾರು ವ ೇಾಡ ುವ ುದ ು ಹ ೊಟ ್ಟಗಾಗಿ, ಗ ೇಣು ಬಟ ್ಟಗಾಗಿ.ಆದರ ೆ ಪ ೂಜ ೆ, ವ ್ಯವ ೇಸಾಯ ು, ಯ ುದ ್ಧ ಇನ ್ನೂ ವ ುಂತಾದ ೆ ವ ೃತಿ ್ತಗ ೇಳಿಂದ ೆ ಹ ೊಟ ್ಟ ಹಾಗ ೂ ಬಟ ್ಟೆಯ ು ಚಿಂತ ೆ ಬಗ ೆಹ ೇರಿಯುತ್ತಿದೆಯ ೇ ಹ ೊರತ ು ಅದರಾಚ ೆಗಿನ ೆ ಆನ ೇಂದ ೆ ಹಾಗ ೂ ವ ುಕಿ ್ತ ದೊರಕಲಾರದು. ಆನಂದಕ್ಕಾಗಿ ಹಾಗೂ ಮುಕ್ತಿಗಾಗಿ ಆದಿಕೇಶವ –ನನ್ನು ಮನಮುಟ್ಟಿಧ್ಯಾನಿಸಬೇಕು ಎಂದಿದ್ದಾನೆಕನಕದಾಸ. ಅಂತಿಮವಾಗಿ ಲೋಕದ ಜಂಜಾಟಗಳಿಂದ ತಲ್ಲಣಕ್ಕೆ ಒಳಗಾಗಿರುವ ಹಾಗೂ ಒಳಗಾಗುತ್ತಿರುವ ಜನರಿಗೆಕನಕದಾಸರು 'ತಲ್ಲಣಿಸದಿರುಕಂಡ್ಯಾ ತಾಳು ಮನವೆ' ಎನ್ನುವತಮ್ಮಕೀರ್ತನೆಯಲ್ಲಿ ಸಕಲ ಜೀವಿಗಳನ್ನು ಸಲಹುವವನು ಒಬ್ಬನಿದ್ದಾನೆಚಿಂತಿಸದಿರು ಮನವೇ ಎಂದುಕರೆಕೊಡುತ್ತಾರೆ. ಅದಕ್ಕಾಗಿಅವರು "ಬೆಟ್ಟದಾತುದಿಯಲಿ ಹುಟ್ಟಿದ ವೃಕ್ಷಕ್ಕೆಕಟ್ಟೆಕಟ್ಟಿ ನೀರೆರದವರುಯಾರು?ನವಿಲಿಗೆ ಚಿತ್ರ ಬಿಡಿಸಿದವರು ಯಾರು?"ಎನ್ನುವ ಕೆಲವು ನಿದರ್ಶನಗಳೊಂದಿಗೆ ಯಾರೂತಲ್ಲಣ ಪಡುವಅವಶ್ಯಕತೆಯಿಲ್ಲ. ಪುಟ್ಟಿಸಿದ ಕಾಗಿನೆಲೆಯಾದಿಕೇಶವನೆಎಲ್ಲರನ್ನು ಸಲುಹುತ್ತಾನೆಎನ್ನುತ್ತಾರೆ.

ನೇಮ. ಹೋಮ, ಹವನಗಳನ್ನು ಮಾಡುವಜನರನ್ನು ಕನಕ ತರಾಟೆಗೆ ತೆಗೆದುಕೊಳ್ಳುತ್ತಾನೆ.

'ನೇಮವಿಲ್ಲದ ಹೋಮ ಇನ್ನೇತಕೆ?ರಾಮನಾಮವು

ಇರದ ಮಂತ್ರವ್ಯಾಕೆ?ನೀರ ಮುಳುಗಲು ಯಾಕೆ?

ನಾರಿಯಳ ಬಿಡಲ್ಯಾಕೆ?ವಾರಕೊಂದುಪವಾಸ ಮಾಡಲ್ಯಾಕೆ?

ಅಂಬರವತೊರೆಯಲ್ಯಾಕೆ?ತಾಂಬೂಲ ಬಿಡಲ್ಯಾಕೆ?

ದಂಬಕದ ವೃತ್ತಿಯಲಿ ಇರಲ್ಯಾತಕೆ?

ಬಂದ ಪಾಪಗಳೆಲ್ಲ ನಿಲ್ಲದೇ ಕಳೆದಾವು ಚಂದಾದಿ

ನೆಲೆಯಾದಿ ಕೇಶವನ ನೆನೆಯೆ॥

ಕುವೆಂಪು ಕೂಡದೇವಸ್ಥಾನಕ್ಕೆ ಹೋಗುವವರನ್ನು ಮನೆಗೆ ಅರ್ಚಕರನ್ನುಕರೆಸುವವರನ್ನು ಹಾಗೂ ಪೂಜೆ ಮಾಡಿಸುವವರನ್ನು ಮೋಸಗಾರರು, ಇಲ್ಲವೇ ಮೂಢರುಎಂದು ನಂಬಿದ್ದರು.

ಸತ್ಯವಂತರ ಸಂಗವಿರಲು ತೀರ್ಥಗಳೇತಕೆ ಎನ್ನುತ್ತಾನೆಕನಕದಾಸ.

"ವಿಪರೀತಕಪಟಗುಣಕಲುಷವಿದ್ದವರು

ಜಪವ ಮಾಡಿದರೇನು। ತಪವ ಮಾಡಿದರೇನು?

ಸತ್ಯವಂತರ ಸಂಗವಿರಲುತೀರ್ಥವೇತಕೆ?"

ಜಪ–ತಪಗಳು ನಿರರ್ಥಕ ಅವುಗಳನ್ನು ಬಿಡಿ ಎಂದುಕರೆಕೊಡುತ್ತಾನೆ. ಸರ್ವಜ್ಞನಲ್ಲೂ ಈ ರೀತಿಯ ವಿಚಾರಕಂಡುಬರುತ್ತದೆ.

ಸತ್ಯರ ನುಡಿತೀರ್ಥ ನಿತ್ಯದ ನಡೆತೀರ್ಥ

ಉತ್ತಮರ ಸಂಗವದುತೀರ್ಥ। ಹರಿವ ನೀ

ರೇತ್ತಣದುತೀರ್ಥ ಸರ್ವಜ್ಞ"

ಕನಕ ಹಾಗೂ ಸರ್ವಜ್ಞರ ಈ ರಚನೆಗಳು 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎನ್ನುವುದನ್ನುಒತ್ತಿ ಹೇಳುತ್ತವೆ.

ಕನಕದಾಸರು ನೂರಾರು ಕೀರ್ತನೆಗಳ ಜೊತೆ ನಾಲ್ಕು ಮಹಾನ್ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿಅದರ ಶ್ರೀಮಂತಿಕೆ ಹೆಚ್ಚಿಸಿದ್ದಾರೆ.ಅವುಗಳೆಂದರೆ 'ಮೋಹನ ತರಂಗಿಣಿ', 'ಹರಿಭಕ್ತಿಸಾರ', 'ನಳಚರಿತೆ' ಹಾಗೂ 'ರಾಮಧಾನ್ಯಚರಿತೆ' ಅವರ ಕೀರ್ತನೆಗಳ ಸಂಖ್ಯೆಕಡಿಮೆಯಿದ್ದರುಕೂಡ ಅವುಗಳು ಮೌಲ್ಯದ ವಿಚಾರದಲ್ಲಿಕಡಿಮೆಯಿಲ್ಲ. ಅದಕ್ಕೆಜಿಎಸ್.ಎಸ್.ಅವರುಕನಕದಾಸರ ಕೀರ್ತನೆಗಳನ್ನು ಕುರಿತು ಹೇಳಿದ ಮಾತುಒಪ್ಪುವಂತಹದ್ದು. "ಪುರಂದರದಾಸರ ಕೀರ್ತನೆಗಳ ಸಂಖ್ಯೆಗೆ ಹೋಲಿಸಿದರೆ ಕನಕದಾಸರ

ಕೀರ್ತನೆಗಳು ಅತ್ಯಲ್ಪವಾಗಿಕಾಣುತ್ತವೆ; ಆದರೆಕನಕದಾಸರ ಕೀರ್ತನೆಗಳ ಸತ್ವವನ್ನು ಗಮನಿಸಿದರೆ ಅವು ಪುರಂದರದಾಸರ ಕೀರ್ತನೆಗಳ ಸತ್ವದೊಂದಿಗೆ ಸಮಸ್ಪರ್ಧಿಯಾಗಬಲ್ಲವು. ಹಾಗೆ ನೋಡಿದರೆ ಪುರಂದರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳಲ್ಲಿ ಕಾವ್ಯಗುಣಒಂದು ಕೈ ಮಿಗಿಲಾಗಿಯೇಇರುವಂತೆತೋರುತ್ತದೆ.” (ಪರಿಶೀಲನ–ಜಿ.ಎಸ್.ಶಿವರುದ್ರಪ್ಪ, ಪುಟ–25)

ಒಟ್ಟಾರೆಕನಕದಾಸರುಡಣ್ಣಾಯಕನಾಗಿ, ಜಾತಿಯ ವಿರೋಧದ ಬಂಡಾಯದಧ್ವನಿಯಾಗಿ, ಕಾಗಿನೆಲೆ ಆದಿಕೇಶವನ ಭಕ್ತನಾಗಿ, ಸಾಹಿತಿಯಾಗಿ, ಮೌಢ್ಯಗಳ ವಿರೋಧಿಯಾಗಿ ಮೂಡಿಸಿದ ಹೆಜ್ಜೆ ಗುರುತುಗಳು ಇನ್ನೂ ಸಪ್ಪಳ ಮಾಡುತ್ತಲೆಇವೆಯೆಂದು ನನಗನಿಸುತ್ತದೆ.ಅಲ್ಲದೆ ಪಾರಂಪರಿಕ ಪಟ್ಟಭದ್ರ ಹುಟ್ಟಡಗಿಸುವಭದ್ರ ಬುನಾದಿ ಹಾಕಿ, ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಿ, ಮಾನವನಅರಿವೆಂಬ ಒಲೆಯಲ್ಲಿ ಸುಜ್ಞಾನದಅಡುಗೆ ಮಾಡಿ ಉಣಬಡಿಸಿದ ದಾರ್ಶನಿಕನಿಗೆ ಶರಣು ಶರಣಾರ್ಥಿ.

*******